# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti,Belagavi - 591156

E-mail:rcubacademic2010@gmail.com
rcuregistrar@gmail.com

ಕುಲಸಚಿವರಕಾರ್ಯಾಲಯ
Office of the Registrar

Website:www.rcub.ac.in
Phone No.: 0831-2565257/34


ಕ್ರ.ಸಂ.: ರಾಚವಿ/ಬೆಳಗಾವಿ/ವಿದ್ಯಾಮಂಡಳ ವಿಭಾಗ/2021–22/ 449 ದಿನಾಂಕ: 26 APR 2021

## ಸುತ್ತೋಲೆ

ವಿಷಯ: **ಕೋವಿಡ್–19 ಮುಂಜಾಗ್ರತಾ ಕ್ರಮಗಳ ನಿರ್ವಹಣಾ ಸಮಿತಿಯನ್ನು ರಚಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:26.04.2021.

ಘನತೆವೆತ್ತ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ದಿನಾಂಕ:21–04–2021 ರಂದು ಜರುಗಿದ ಸಭೆಯಲ್ಲಿ ತೀರ್ಮಾನಿಸಿದಂತೆ, ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಆದೇಶದನ್ವಯ ಪ್ರತಿ ಮಹಾವಿದ್ಯಾಲಯದಲ್ಲಿ ಆಯಾ ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಕೊರೊನಾ ವೈರಸ್ (ಕ್ಲೋವಿಡ್–19) ಮುಂಜಾಗ್ರತಾ ಕ್ರಮಗಳ ನಿರ್ವಹಣೆಗಾಗಿ ಕೋವಿಡ್ ನಿರ್ವಹಣಾ ಸಮಿತಿಯನ್ನು ರಚಿಸುವಂತೆ ತಿಳಿಸಲಾಗಿದೆ.

**ಸದರಿ ಸಮಿತಿಯು ಈ ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವುದು.**

1. ಸದರಿ ಸಮಿತಿಯು ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಕೊರೊನಾ ವೈರಸ್ (ಕೋವಿಡ್–19) ಬಗ್ಗೆ ಈ ಕೆಳಗಿನ ಮುಂಜಾಗ್ರತಾ ಕ್ರಮದ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದು.
    - ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸುವುದು.
    - ಸ್ಯಾನಿಟೈಜರ್ ಮತ್ತು ಥರ್ಮಲ್ ಸ್ಕ್ರೀನಿಂಗ್ ಉಪಯೋಗಿಸುವುದು.
    - ಸಾಮಾಜಿಕ ಅಂತರ ಕಾಪಾಡುವುದು.
    - ಕೋವಿಡ್–19 ಸೋಂಕಿತರು ಪ್ರತ್ಯೇಕ ವಾಸವಿರುವುದು.
    - ಕೊರೊನಾ ವೈರಸ್ (ಕೋವಿಡ್–19) ನ್ನು ತಡೆಗಟ್ಟಲು ಸರ್ಕಾರದಿಂದ ಹೊರಡಿಸಲ್ಪಟ್ಟ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
2. ಸದರಿ ಸಮಿತಿಯು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಮೇಲ್ಕಾಣಿಸಿದ ಕೋವಿಡ್–19ರ ನಿಯಮಗಳ ಬಗ್ಗೆ ತಿಳುವಳಿಕೆ ನೀಡಿದ ನಂತರ ಸದರಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಸಾರ್ವಜನಿಕರಿಗೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರಲ್ಲಿ ಕೊರೊನಾ ವೈರಸ್ (ಕೋವಿಡ್–19)ರ ನಿಯಮಗಳನ್ನು ಪಾಲಿಸುವಂತೆ ಜಾಗೃತಿಯನ್ನು ಮೂಡಿಸಲು ಪ್ರೇರೇಪಿಸುವುದು.
3. ಸಾರ್ವಜನಿಕರು ತುರ್ತು ಸಂದರ್ಭದಲ್ಲಿ ಮಾತ್ರ ಮನೆಯಿಂದ ಹೊರಬರುವಂತೆ ಅರಿವು ಮೂಡಿಸುವುದು.
4. ತುರ್ತು ಪರಿಸ್ಥಿತಿಯಲ್ಲಿ ತಮ್ಮ ಮಹಾವಿದ್ಯಾಲಯದ ಎನ್.ಎಸ್.ಎಸ್ ಮತ್ತು ಯುತ್ ರೆಡ್‌ಕ್ರಾಸ್ ಸೇವೆಯನ್ನು ಪಡೆಯುವುದು.

ಕುಲಸಚಿವರು
ಕುಲಸಚಿವರು
ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ
ಬೆಳಗಾವಿ

**ಇವರಿಗೆ,**

1. ನಿರ್ದೇಶಕರು/ ಸಂಯೋಜಕರು, ವಿಜಯಪುರ, ಬಾಗಲಕೋಟ, ಜಮಖಂಡಿಯಸ್ನಾತಕೋತ್ತರ ಕೇಂದ್ರಗಳು.
2. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
3. ಪ್ರಾಚಾರ್ಯರು, ಎಲ್ಲ ಸಂಯೋಜಿತ ಸ್ನಾತಕೋತ್ತರ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ನಿರ್ದೇಶಕರು/ ಸಂಯೋಜಕರು, ವಿಜಯಪುರ, ಬಾಗಲಕೋಟ, ಮತ್ತು ಜಮಖಂಡಿಯ ಸ್ನಾತಕೋತ್ತರ ಕೇಂದ್ರಗಳು.
5. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
6. ಪ್ರಾಚಾರ್ಯರು, ಸಂಯೋಜಿತ ಸ್ನಾತಕೋತ್ತರ ಮಹಾವಿದ್ಯಾಲಯಗಳು.
7. ರಕ್ಷಾ ಪ್ರತಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕುಲಸಚಿವರ ಕಾರ್ಯಾಲಯ ಬೆಳಗಾವಿ